‘ ನನಗೆ ಸ್ಟೈಲ್‌ನಲ್ಲಿ ನಂಬಿಕೆಯಿಲ್ಲ. ಸ್ಟೈಲ್ ಅಂದರೆ ಅದು ನೀವೇ. ಶೈಲಿ ಎಂದರೆ ವ್ಯಕ್ತಿ. ಇದೊಂದು ನಿರ್ವಿವಾದದ ಸತ್ಯ. ನೀವು ಶೈಲಿಯನ್ನು ರೂಪಿಸುವುದಿಲ್ಲ. ನಿಮ್ಮ ಕೆಲಸ ನೀವು ಮಾಡುವಿರಿ. ನಿಮ್ಮಂತೆ ನೀವು ಬೆಳೆಯುವಿರಿ. ನಿಮ್ಮ ಇರುವಿಕೆ ನಿಮ್ಮ ಶೈಲಿಯಾಗುತ್ತದೆ.

ಸಲ ತಿದ್ದಿ ಬರೆದಿದ್ದೆ. ನನಗಾಗ ಮೂವತ್ಮೂರು ವರ್ಷ. ನೀವು ಸಂಪೂರ್ಣವಾಗಿ ಸಿದ್ಧವಾಗುವುದಕ್ಕೂ ಮುಂಚೆ ಪ್ರಕಟಿಸುವುದು ಸರಿಯಲ್ಲ. ಒಮ್ಮೆ ಕತೆ ಬರೆದು ಮುಗಿಸಿದ ಮೇಲೆ ಬೇರೆ ಯಾರೂ ಅದನ್ನು ತಿದ್ದಲು ಬಿಡುವುದಿಲ್ಲ. ಮತ್ತೊಬ್ಬರ ಸಲಹೆಯ ಮೇರೆಗೂ ತಿದ್ದುವುದಿಲ್ಲ. “ಇದು ನನ್ನ ಕತೆ. ಬರೆದು ಮುಗಿಸಿದ್ದೇನೆ. ತೆಗೆದುಕೊಳ್ಳಿ, ಇಲ್ಲ ಬಿಡಿ!”

◆ **ನಿಮ್ಮನ್ನು ಸ್ಟೈಲಿಸ್ಟ್ ಅಂತ ಕರೀತಾರಲ್ಲ. ಶೈಲಿಯನ್ನು ರೂಢಿಸಿಕೊಳ್ಳಬಹುದು ಅಥವ ಸುಧಾರಿಸಬಹುದು ಅಂತ ನಿಮಗೆ ಅನ್ನಿಸುತ್ತದೆಯೇ?**

ನನಗೆ ಸ್ಟೈಲ್‌ನಲ್ಲಿ ನಂಬಿಕೆಯಿಲ್ಲ. ಸ್ಟೈಲ್ ಅಂದರೆ ಅದು ನೀವೇ. ಶೈಲಿ ಎಂದರೆ ವ್ಯಕ್ತಿ. ನನಗೆ ತಿಳಿದಮಟ್ಟಿಗೆ ಇದನ್ನು ಮೊದಲಿಗೆ ಹೇಳಿದ್ದು ಅರಿಸ್ಟಾಟಲ್. ಇದೊಂದು ನಿರ್ವಿವಾದದ ಸತ್ಯ. ನೀವು ಶೈಲಿಯನ್ನು ರೂಪಿಸುವುದಿಲ್ಲ. ನಿಮ್ಮ ಕೆಲಸ ನೀವು ಮಾಡುವಿರಿ. ನಿಮ್ಮಂತೆ ನೀವು ಬೆಳೆಯುವಿರಿ. ನಿಮ್ಮ ಇರುವಿಕೆ ನಿಮ್ಮ ಶೈಲಿಯಾಗುತ್ತದೆ. ಸಂಕೇತವಾದ ಕೂಡ ಹಾಗೆಯೇ.

“ಹೂಬಿಟ್ಟ ಮರಕ್ಕೆ ಜುದಾಸ್ ನೇಣು ಹಾಕಿಕೊಳ್ಳುತ್ತಾನೆ. ಅದೇ ನನ್ನ ಕತೆಯ ಕೇಂದ್ರವಾಗುತ್ತದೆ” ಎಂದು ನಾನೆಂದೂ ಹೇಳಲಿಲ್ಲ. ಅದನ್ನು ಬರೆದು ಮುಗಿಸಿದ ಮೇಲೆ ‘Flowering Judas’ ಎಂದು ಹೆಸರಿಟ್ಟೆ. ಬರೆದದ್ದನ್ನು ಮತ್ತೆ ಓದುವಾಗ ಅದರಲ್ಲಿನ ಸಾಂಕೇತಿಕತೆ ಮತ್ತು ವಿನ್ಯಾಸವನ್ನು ಗಮನಿಸಿದೆ. ಬರೆಯುವಾಗ ಅಪ್ರಜ್ಞಾಪೂರ್ವಕವಾಗಿ ಆ ರೀತಿ ಬರೆದಿದ್ದೆ. ಇತ್ತೀಚಿನ ದಿನಗಳಲ್ಲಿ ಅಮೆರಿಕೆಯ ಕಾಲೇಜುಗಳಲ್ಲಿನ ಬರವಣಿಗೆಯ ಕೋರ್ಸುಗಳಲ್ಲಿ ಸಂಕೇತವಾದದ ಹುಚ್ಚು ಅಡರಿಕೊಂಡಿದೆ. ಮಿಸ್ ಮೆಕಾರ್ಥಿ ಬಹಳ ಒಳ್ಳೆಯ ವಿಮರ್ಶಕಿ. ಆಕೆ ಪುಟ್ಟ ಹುಡುಗಿಯೊಬ್ಬಳು ತಾನು ಬರೆದ ಕತೆಯೊಂದನ್ನು ತಂದು ತೋರಿಸಿದ ಕತೆ ಹೇಳುತ್ತಾಳೆ. ಆ ಹುಡುಗಿಯ ಕತೆ ಚೆನ್ನಾಗಿರುತ್ತದೆ. ಅವಳಿಗೆ ತನ್ನ ಅನಿಸಿಕೆಯನ್ನು ತಿಳಿಸಿ ಇನ್ನೂ ಏನಾದರೂ ಬರಿ ಎಂದು ಹೇಳುತ್ತಾಳೆ. ಆಗ ಆ ಹುಡುಗಿ “ಮಿಸ್ ಮೆಕಾರ್ಥಿ, ನಮ್ಮ ಬರವಣಿಗೆಯ ಟೀಚರ್ ಹೇಳಿದರು, ‘ಇದು ಒಳ್ಳೆಯ ಕತೆ. ನಾವೀಗ ಮತ್ತೆ ಕತೆಯನ್ನು ಮೊದಲಿಂದ ಸಂಕೇತಗಳನ್ನು ಸೇರಿಸಿ ಬರೆಯಬೇಕು’ ಎಂದು” ಎನ್ನುತ್ತಾಳೆ. ನನಗೆ ಈ ಕತೆ ಬಹಳ ಇಷ್ಟವಾಯಿತು.

◆ **ಭಾಷೆಯ ಮೇಲಿನ ಹಿಡಿತವನ್ನು ಕಲಿಯಬಹುದು, ಸುಧಾರಿಸಿಕೊಳ್ಳಬಹುದು ಅಲ್ಲವೇ?**

ನನಗೆ ಭಾಷೆಯ ಶುದ್ಧತೆ ಬಹಳ ಇಷ್ಟ. ನನ್ನ ವಿದ್ಯಾರ್ಥಿಗಳಿಗೆ, ನನ್ನ ಮಾತನ್ನು ಕೇಳುವವರಿಗೆ ಯಾವಾಗಲೂ ಹೇಳುತ್ತಿರುತ್ತೇನೆ – ಪಾರಿಭಾಷಿಕಗಳನ್ನು, ವೈಜ್ಞಾನಿಕ ಭಾಷೆಯನ್ನು ಬಳಸಬೇಡಿ.